**ಕರ್ನಾಟಕ ಸರ್ಕಾರ**

**ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಐವಾನ್.ಎ.ಶಾಹಿ ಬಡಾವಣೆ, ಕಲಬುರಗಿ**

ಸಂಖ್ಯೆ: ಸಿ2(2)/ಆಡಳಿತ/ಕಾ,ಸ್ವ.ಹೆ.ಬಡ್ತಿ/26/2023-24 (III) ದಿನಾಂಕ: 30/01/2024

**ಜ್ಞಾಪನ**

ವಿಷಯ: 1999 ನೇ ಸಾಲಿನಲ್ಲಿ ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ ಗ್ರೂಪ್-ಬಿ ವೃಂದದ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ಹುದ್ದೆಗಳಲ್ಲಿ ನೇಮಕಗೊಂಡು ಮುಂಬಡ್ತಿ ಇಲ್ಲದೆ ಸತತ 20 ವರ್ಷಗಳ ಕಾಲ ಸೇವೆಯನ್ನು ಸಲ್ಲಿಸಿರುವ ಗ್ರೂಪ್-'ಬಿ' ವೃಂದದ ಅಧಿಕಾರಿಗಳಿಗೆ ಒಂದನೇ ಹೆಚ್ಚುವರಿ ವೇತನ ಬಡ್ತಿ ಮಂಜೂರು ಮಾಡುವ ಕುರಿತು.

ಉಲ್ಲೇಖ: 1) ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 13 ಎಸ್‌ಆರ್‌ಪಿ 2002, ದಿನಾಂಕ: 09/05/2002.
2) ಸರ್ಕಾರದ ಆದೇಶ ಸಂಖ್ಯೆ: ಇಡಿ 250 ಡಿಪಿಐ 2006, ದಿನಾಂಕ: 22/02/2008.
3) ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 31 ಎಸ್‌ಆರ್‌ಪಿ 2007(iii), ದಿನಾಂಕ: 14/08/2008.
4) ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 30 ಎಸ್‌ಆರ್‌ಪಿ 2012, ದಿನಾಂಕ: 31/01/2014.
5) ಸರ್ಕಾರಿ ಆದೇಶ ಸಂಖ್ಯೆ: ಇಡಿ 40 ಎಸ್‌ಓಹೆಚ್ 2019, ದಿನಾಂಕ: 16/08/2021.
6) ಉಪನಿರ್ದೇಶಕರು(ಆಡಳಿತ), ಶಾ.ಶಿ.ಇ, ಯಾದಗಿರಿ ಇವರ ಪ್ರಸ್ತಾವನೆ.
7) ಇಲಾಖಾ ಮುಂಬಡ್ತಿ ಸಮಿತಿ ಸಭೆ ನಡುವಳಿಗಳು ದಿನಾಂಕ: 26/10/2023.

ಉಲ್ಲೇಖ (2)ರ ಸರ್ಕಾರದ ಆದೇಶದನ್ವಯ ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ ಇವರನ್ನು ಗ್ರೂಪ್-'ಬಿ' ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ವೃಂದದ ಅಧಿಕಾರಿಗಳ ನೇಮಕಾತಿ ಪ್ರಾಧಿಕಾರವಾಗಿ ಗುರುತಿಸಲಾಗಿದೆ.

ಗ್ರೂಪ್-'ಬಿ' ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ವೃಂದದ ಹುದ್ದೆಗಳಲ್ಲಿ ನೇಮಕಾತಿ ಹೊಂದಿ ಸತತ 20 ವರ್ಷಗಳ ಕಾಲ ಯಾವುದೇ ಮುಂಬಡ್ತಿ ಇಲ್ಲದೆ, ನಿರಂತರ ಅದೇ ಹುದ್ದೆಯಲ್ಲಿ ಸೇವೆ ಸಲ್ಲಿಸಿರುವ ಪ್ರಯುಕ್ತ ಉಲ್ಲೇಖ (1) ಮತ್ತು (4) ರನ್ವಯ ಒಂದು ಹೆಚ್ಚುವರಿ ವೇತನ ಬಡ್ತಿಗೆ ಅರ್ಹರಿರುತ್ತಾರೆ. ಉಲ್ಲೇಖ (6) ರನ್ವಯ ವಿಭಾಗದ ಉಪ ನಿರ್ದೇಶಕರು(ಆಡಳಿತ) ರವರು ಸಲ್ಲಿಸಿರುವ ಕೆಳಕಂಡ ಕೋಷ್ಟಕದಲ್ಲಿ ನಮೂದಿಸಿದ ಅಧಿಕಾರಿಗಳು, ಅವರು ನೇಮಕಾತಿ ಹೊಂದಿದ ಹುದ್ದೆಯಲ್ಲಿ ಯಾವುದೇ ಮುಂಬಡ್ತಿ ಇಲ್ಲದೇ 20 ವರ್ಷ ಮತ್ತು ಅದಕ್ಕೂ ಮೀರಿ ಸೇವೆ ಸಲ್ಲಿಸಿರುವುದರಿಂದ, ಅವರುಗಳಿಗೆ ಒಂದು ಹೆಚ್ಚುವರಿ ವೇತನ ಬಡ್ತಿ ಮಂಜೂರಾತಿಗೆ ಶಿಫಾರಸ್ಸು ಮಾಡಿ ಅಗತ್ಯವಿರುವ ದಾಖಲೆಗಳನ್ನು ಲಗತ್ತಿಸಿ ಪ್ರಸ್ತಾವನೆಗಳನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಗಳನ್ನು ದಿನಾಂಕ: 26/10/2023 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ಪರಿಶೀಲಿಸಿ, ಉಲ್ಲೇಖ (1) ರ ಆದೇಶದಲ್ಲಿ ವಿಧಿಸಿದ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಕೆಳಕಂಡ ಪಟ್ಟಿಯಲ್ಲಿರುವ ಅರ್ಹ ಗ್ರೂಪ್-ಬಿ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ವೃಂದದ ಅಧಿಕಾರಿಗಳಿಗೆ ಹಾಲಿ ವೇತನ ಪಡೆಯುತ್ತಿರುವ ವೇತನ ಶ್ರೇಣಿಯಲ್ಲಿ, ಒಂದು ಹೆಚ್ಚುವರಿ ವೇತನ ಬಡ್ತಿಯನ್ನು ಕಾಲಂ 4 ರಲ್ಲಿ ನಮೂದಿಸಿರುವ ದಿನಾಂಕದಿಂದ ಅನ್ವಯಿಸುವಂತೆ ಮಂಜೂರು ಮಾಡಿ ಆದೇಶಿಸಿದೆ.

| ಕ್ರ.ಸ | ಅಧಿಕಾರಿ ಹೆಸರು ಹುದ್ದೆ ವಿಳಾಸ | ಗ್ರೂಪ್-ಬಿ ಹುದ್ದೆಗೆ ಸೇರಿದ ದಿನಾಂಕ | 20 ವರ್ಷದ ಹೆಚ್ಚುವರಿ ವೇತನ ಬಡ್ತಿಗೆ ಅರ್ಹತಾ ದಿನಾಂಕ | ಹಾಲಿ ವೇತನ ಶ್ರೇಣಿ | ಹೆಚ್ಚುವರಿ ವೇತನ ಬಡ್ತಿ ನಂತರದ ವೇತನ ಮತ್ತು ವೇತನ ಶ್ರೇಣಿ |
|---|---|---|---|---|---|
| 1 | ಶ್ರೀಮತಿ ಅಮೃತಬಾಯಿ ಜಹಾಗೀರದಾರ, ಜಿಲ್ಲಾ ಯೋಜನಾ ಉಪಸಮನ್ವಯಾಧಿಕಾರಿಗಳು (RMSA), ಉಪನಿರ್ದೇಶಕರ ಕಾರ್ಯಾಲಯ ಯಾದಗಿರಿ. | 18-11-1999 | 18-11-2019 | 72500 [48900-92700] | 74400 [48900-92700] |

Digitally Signed by Dr.
Akash S
Date: 03-02-2024 12:53:55
Reason: Approved

(ಡಾ. ಆಕಾಶ್ ಎಸ್. ಭಾ.ಆ.ಸೇ)
ಅಪರ ಆಯುಕ್ತರು
ಶಾಲಾ ಶಿಕ್ಷಣ ಇಲಾಖೆ ಕಲಬುರಗಿ

ಪ್ರತಿಯನ್ನು:

1) ಮಹಾಲೇಖಪಾಲರು(ಲೆ&ಹ), ಕರ್ನಾಟಕ ಪಾರ್ಕ ಹೌಸ್ ರೋಡ್ ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಕರ್ನಾಟಕ ಸರ್ಕಾರದ ಸಚಿವಾಲಯ, ಬೆಂಗಳೂರು.
3) ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಮತ್ತು ಧಾರವಾಡ.
4) ಉಪ ನಿರ್ದೇಶಕರು, ಜಿಲ್ಲಾ ಖಜಾನೆ, ಯಾದಗಿರಿ.
5) ಉಪ ನಿರ್ದೇಶಕರು(ಆಡಳಿತ), ಶಾಲಾ ಶಿಕ್ಷಣ ಇಲಾಖೆ, ಯಾದಗಿರಿ.
6) ಸಂಬಂಧಿಸಿದ ಡಯಟಗಳ ಉಪನಿರ್ದೇಶಕರು(ಅಭಿವೃದ್ಧಿ) ರವರಿಗೆ.
7) ಶ್ರೀಮತಿ ಅಮೃತಬಾಯಿ ಜಹಾಗೀರದಾರ, ಜಿಲ್ಲಾ ಯೋಜನಾ ಉಪಸಮನ್ವಯಾಧಿಕಾರಿಗಳು (RMSA), ಉಪನಿರ್ದೇಶಕರ ಕಾರ್ಯಾಲಯ ಯಾದಗಿರಿ.